**''Azadi Ka Amrit Mahotsav''**
**INDIA@75**

**ಕೃಷಿ ವಿಶ್ವ ವಿದ್ಯಾನಿಲಯ**
**ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)**
**ಜಿ.ಕೆ.ವಿ.ಕೆ., ಬೆಂಗಳೂರು-560065**

*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

**ದಿನಾಂಕ:** 21.12.2021

## ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

### ಕಳೆದ ಐದು ದಿನಗಳ ಹವಾಮಾನ ಸಾರಂಶ

| ನಿಯತಾಂಕಗಳು | 17.12.2021 | 18.12.2021 | 19.12.2021 | 20.12.2021 | 21.12.2021 |
|---|---|---|---|---|---|
| ಮಳೆ (ಮಿ ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 26.0 | 26.2 | 25.8 | 27.8 | 27.4 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 19.6 | 13.2 | 13.0 | 13.8 | 13.4 |
| ಮೋಡ ( ಪ್ರಮಾಣ) | 0 | 0 | 0 | 0 | 6 |
| ಆರ್ದ್ರತೆ 7.20 ಬೆ (ಶೇ) | 93 | 79 | 75 | 88 | 96 |
| ಆರ್ದ್ರತೆ 2.20 ಮ (ಶೇ) | 58 | 60 | 55 | 55 | -- |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 6.0 | 4.3 | 5.6 | 5.3 | 4.0 |
| ಗಾಳಿಯ ದಿಕ್ಕು ( ಡಿಗ್ರಿ) | 45 | 45 | 45 | 45 | 45 |

### ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)
(ದಿನಾಂಕ 22-12-2021 ರಿಂದ 26-12-2021 ವರೆಗೆ)

| ನಿಯತಾಂಕಗಳು | 22.12.2021 | 23.12.2021 | 24.12.2021 | 25.12.2021 | 26.12.2021 |
|---|---|---|---|---|---|
| ಮಳೆ (ಮಿ ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 27 | 27 | 28 | 28 | 28 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 15 | 14 | 15 | 15 | 15 |
| ಮೋಡ ( ಪ್ರಮಾಣ) | 2 | 0 | 0 | 0 | 0 |
| ಆರ್ದ್ರತೆ 7.20 ಬೆ (ಶೇ) | 88 | 88 | 88 | 90 | 90 |
| ಆರ್ದ್ರತೆ 2.20 ಮ (ಶೇ) | 47 | 47 | 47 | 49 | 49 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 7 | 8 | 10 | 10 | 12 |
| ಗಾಳಿಯ ದಿಕ್ಕು ( ಡಿಗ್ರಿ) | 99 | 108 | 108 | 111 | 111 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆ0ಯಾಗುವ ಸಾದ್ಯತೆ ಕಡಿಮೆ. ದಿನದ ಗರಿಷ್ಠ ಉಷ್ಣಾಂಶ **27.0-28.0°C** ಮತ್ತು ಕನಿಷ್ಠ **14.0-15.0°C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **88-90** % ಇದ್ದು ಮಧ್ಯಾಹ್ನ **47-49** % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **7-12** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ಮೂಲ ಮಳೆಯ ಕಾಲವು ಡಿಸೆಂಬರ್ ತಿಂಗಳ 16 ರಿಂದ ಡಿಸೆಂಬರ್ ತಿಂಗಳ 28 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 4.1 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| ಸಾಮಾನ್ಯ | | ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ<br>ಅಲಸಂದೆ : ಟಿ.ವಿ.ಎಕ್ಸ್-944, ಕೆ.ಬಿ.ಸಿ-1, ಅವರೆ-ಎಚ್.ಎ-3 ಮತ್ತು 4,ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್-1,41,42,44 ಮತ್ತು 53, ಹುರುಳಿ: ಪಿ.ಎಚ್.ಜಿ-9 ಮತ್ತು ಕೆ.ಬಿ.ಎಚ್-1, ಹುಚ್ಚೆಳ್ಳು ತಳಿಗಳನ್ನು ಬಿತ್ತನೆ/ನಾಟಿ |

| | | |
|---|---|---|
| | | ಮಾಡುವುದು |
| | | • ರೈತ ಬಾಂದವರು ಕಟಾವು ಮಾಡಿರುವ ಬೆಳೆಗಳನ್ನು ಸ್ವಚ್ಛ ಮಾಡಿ ಒಕ್ಕಣೆ ಮಾಡಿ, ಬಿಸಿಲಿನಲ್ಲಿ ಒಣಗಿಸಿ ಚೀಲದಲ್ಲಿ ಶೇಖರಿಸಿ.<br>• ಕಟಾವು ಮಾಡಿದ ಬಿತ್ತನೆ ಬೀಜಗಳನ್ನು ಸರಿಯಾಗಿ ಒಣಗಿಸಬೇಕು. ಅಂದರೆ ಏಕದಳ ಧಾನ್ಯಗಳು ತೇವಾಂಶ ಶೇ. 11 ರಿಂದ 12, ದ್ವಿದಳಧಾನ್ಯಗಳ ತೇವಾಂಶ ಶೇ.9, ಎಣ್ಣೆಕಾಳುಗಳು ಶೇ.8 ಮತ್ತು ತರಕಾರಿ ಬೀಜಗಳು ಶೇ 5 ರಿಂದ 6 ರಷ್ಟಿರಬೇಕು. ಇದರಿಂದ ಹೆಚ್ಚುದಿನ ಕೆಡದಂತೆ ಬೀಜಗಳನ್ನು ಸಂಸ್ಕರಣೆ ಮಾಡಬಹುದು ಜೊತೆಗೆ ಉಗ್ರಾಣ ಕೀಟದ ಬಾಧೆಯನ್ನು ಕಡಿಮೆಮಾಡಬಹುದು.<br>• ದ್ವಿದಳಧಾನ್ಯಗಳನ್ನು ಸಂಸ್ಕರಣಾ ಕೀಟಗಳಿಂದ ರಕ್ಷಿಸಲು ಎಣ್ಣೆಯ ಲೇಪನಮಾಡಿ ಸಂಗ್ರಹಿಸಬೇಕು (ಔಡಲ, ಅಗಸಿ, ಹೊಂಗೆ ಅಥವಾ ಬೇವಿನ ಎಣ್ಣೆ) ಪ್ರತಿ ಕಿ.ಗ್ರಾಂ ಬೀಜಕ್ಕೆ 3 ರಿಂದ 5 ಮಿ.ಲೀ. ಎಣ್ಣೆಯನ್ನು ಉಪಯೋಗಿಸಬೇಕು. |
| ತೊಗರಿ | ಕಾಳು ಬಲಿಯುವ ಮತ್ತು ಕಟಾವು | 1. ಚೆನ್ನಾಗಿ ಬಲಿತಿರುವ ತೊಗರಿ ಕಾಳುಗಳನ್ನು ಕುಡುಗೋಲಿನಿಂದ ಕಟಾವು ಮಾಡಬಹುದು ಮತ್ತು ಹಸಿರು ಕಾಯಿಯನ್ನು ತರಕಾರಿಗಾಗಿ ಉಪಯೋಗಿಸಬಹುದು ಮತ್ತು ಮಾರಾಟ ಮಾಡಬಹುದು.<br>2. ಕಟಾವು ಮಾಡಿರುವ ಬೆಳೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಒಕ್ಕಣೆ ಮಾಡಿ ಗೋಣಿ ಚೀಲದಲ್ಲಿ ಶೇಖರಿಸಿ |
| ರಾಗಿ | ಕಟಾವು | 1. ಕಟಾವಿಗೆ ಬಂದಿರುವ ರಾಗಿ ತೆನೆಗಳನ್ನು ಕುಡುಗೋಲಿನಿಂದ ಕಟಾವು ಮಾಡಬಹುದು<br>2. ಗಿಡವು ನೆಲಕ್ಕೆ ಬಿದ್ದಿಲ್ಲವಾದಲ್ಲಿ ರಾಗಿ ಕಟಾವು ಮಾಡುವ ಯಂತ್ರದಿಂದ ಕಟಾವು ಮಾಡಬಹುದು<br>3. ಕಟಾವು ಮಾಡಿರುವ ಬೆಳೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಗೋಣಿ ಚೀಲದಲ್ಲಿ ಶೇಖರಿಸಿ |
| ಮೆಕ್ಕೆಜೋಳ | ಕಟಾವು | 1. ಕಟಾವು ಮಾಡಿರುವ ತೆನೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ |
| ನೆಲಗಡಲೆ | ಕಟಾವು | 1. ಗಿಡದಿಂದ ಕಾಯಿಯನ್ನು ಬೇರ್ಪಡಿಸಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಸಂಗ್ರಹಿಸುವುದು |
| ಮಾವು | ಹೂವಿನ ಕುಡಿ ಚಿಗುರುವ ಮತ್ತು ಹೂವಿನ ಹಂತ | 1. ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಚ್ಚಿದ ಕೂಡಲೇ ಜಿಗಿಹುಳು ಮತ್ತು ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ 4ಗ್ರಾಂ ಕಾರ್ಬರಿಲ್ (50 wp) ಅಥವಾ 0.3 ಮಿ.ಲೀ ಇಮಿಡಾಕ್ಲೋಪ್ರಿಡ್ 200.ಎಸ್.ಎಲ್ ಅಥವಾ 0.5 ಮಿ.ಲೀ ಲ್ಯಾಂಬ್ಡಾ ಸೈಯೋಲೋಥ್ರಿನ್ (5 ಇಸಿ)<br>2. ಜೊತೆಗೆ 3ಗ್ರಾಂ. ನೀರಿನಲ್ಲಿ ಕರಗುವ ಗಂಧಕ (ಸಲ್ ಟಾಫ್ 80wp) ಪ್ರತಿ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಿ.<br>3. ಜಿಗಿಹುಳುವಿನ ಹಾವಳಿ ತೀವ್ರವಾಗಿದ್ದಲ್ಲಿ ಅಝಾಡಿರೆಕ್ಟಿನ್ (10,000 ಪಿ.ಪಿ.ಎಮ್) 7 ಮಿ.ಲೀ/ಲೀ ನೀರಿನಲ್ಲಿ ಸಿಂಪಡಿಸಿ.<br>4. ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಛಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತುತೆಗೆಯಬೇಕು.<br>5. ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಛಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತುತೆಗೆಯಬೇಕು. |
| **ಪಶುಸಂಗೋಪನೆ** | | 1. ತಾಪಮಾನದಲ್ಲಿ ಹಠಾತ್ ಕುಸಿತದಿಂದ ಪ್ರಾಣಿಗಳನ್ನು ರಕ್ಷಿಸಲು ರಾತ್ರಿಯ ಸಮಯದಲ್ಲಿ ಮುಚ್ಚಿದ ಶೆಡ್ ಪ್ರದೇಶದಲ್ಲಿ ಇರಿಸಿ.<br>2. ಪ್ರಾಣಿಗಳ ಶೆಡ್‌ಗಳಲ್ಲಿನ ನೆಲ ಹಾಸು/ಹುಲ್ಲನ್ನು ಪ್ರತಿದಿನ ಬದಲಾಯಿಸಬೇಕು.<br>3. ಕೆಲವು ಪ್ರದೇಶಗಳಲ್ಲಿ ಚಳಿಗಾಲದ ತಿಂಗಳುಗಳಲ್ಲಿ ಉಂಟಾಗುವ ಕೊರತೆಯ ಅವಧಿಗೆ ಮೇವನ್ನು ಸಂಗ್ರಹಿಸಲು ಸರಿಯಾದ ಕಾಳಜಿ ವಹಿಸಬೇಕು, ಈ ಸಮಯದಲ್ಲಿ ದೀರ್ಘಕಾಲಿಕ ಹುಲ್ಲುಗಳನ್ನು ಕತ್ತರಿಸಬೇಕು. |
| **ಕೋಳಿ ಸಾಕಾಣಿಕಾ** | | 1. ಬಿಸಿಲು, ಮಳೆ ಮತ್ತು ಬೀಸು ಗಾಳಿಯನ್ನು ತಪ್ಪಿಸಲು ಕೋಳಿ ಮನೆಯನ್ನು ಪೂರ್ವ–ಪಶ್ಚಿಮಕ್ಕೆ ಉದ್ದುದ್ದವಾಗಿ ಆಯಾಕಾರವಾಗಿ ಕಟ್ಟುವುದು ಸೂಕ್ತ.<br>2. ಮೊಟ್ಟೆಯಿಂದ ಮರಿಗಳ ಬಂದ ನಂತರ ಮೊದಲನೇ ವಾರದಲ್ಲಿ ಶಾಖದ ಬುಟ್ಟಿಯ ಕೆಳಗೆ ಬಿಡಬೇಕು ಮತ್ತು ಶಾಖದ ಬುಟ್ಟಿಯ ಅಂಚಿನಲ್ಲಿ ನೆಲಕ್ಕೆ ಹರಡಿರುವ ಸತ್ತೆಯಿಂದ 8 ಸೆ.ಮೀ. ಮೇಲೆ $35^0$ ಸೆ. ಶಾಖ ಇರಬೇಕಾಗುತ್ತದೆ. ಅನಂತರ ವಾರಕ್ಕೆ $2^0$ ಸೆ. ನಂತೆ ಕಡಿಮೆ ಮಾಡಿ, ನಾಲ್ಕು ವಾರಗಳ ನಂತರ ಬಿಸಿ ಬುಟ್ಟಿಗಳನ್ನು ತೆಗೆಯಬೇಕು.<br>3. ಚಳಿಗಾಲವಿರುವುದರಿಂದ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಉಷ್ಣಾಂಶದ ಸ್ಥಿರತೆ ಕಾಪಾಡಲು ವಿದ್ಯುತ್ ಬಲ್ಬ್ ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುತ್ತದೆ.<br>4. ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಕಿಟಕಿಯಲ್ಲಿ ಚಳಿಗಾಳಿಯು ಹೆಚ್ಚಾಗಿ ಬೀಸುವುದರಿಂದ ಪರದೆಯನ್ನು ಮುಚ್ಚಿ ಚಳಿಯಿಂದ ರಕ್ಷಿಸಬೇಕು. |
| **ರೇಷ್ಮೆ ಸಾಕಾಣಿಕೆ** | | 1. **ಸುಣ್ಣ ಕಟ್ಟು ರೋಗ:** ಈ ರೋಗವು ಸಾಮಾನ್ಯವಾಗಿ ಮಳೆಗಾಲ ಮತ್ತು ಚಳಿಗಾಲದಲ್ಲಿ ಕೆಲವು ಶಿಲೀಂಧ್ರಗಳ ಸೋಂಕಿನಿಂದ (ಬ್ಯುವೇರಿಯಾ ಬ್ಯಾಸಿಯಾನಾ) ಬರುತ್ತದೆ.<br>**2.** ರೋಗವನ್ನು ಯಶಸ್ವಿಯಾಗಿ ನಿಯಂತ್ರಿಸಬೇಕಾದರೆ ಉಷ್ಣಾಂಶ ಮತ್ತು ತೇವಾಂಶವನ್ನು ಶಿಫಾರಸ್ಸು ಮಾಡಿದ ರೀತಿಯಲ್ಲಿ ಕಾಪಾಡಬೇಕು. |

| | |
|---|---|
| | 3. ಜ್ವರಕ್ಕೆ ಕೂತಾಗ ಹಾಸಿಗೆಯನ್ನು ಲಘುವಾಗಿ ಹರಿದು ಸುಣ್ಣದ ಪುಡಿಯನ್ನು (5–6 ಗ್ರಾಂ/ಚದರ ಅಡಿಗೆ) ಧೂಳೀಕರಿಸುವುದನ್ನು ಮರೆಯಬಾರದು.<br>4. ರೇಷ್ಮೆ ಸಾಕಾಣಿಕಾ ಘಟಕದಲ್ಲಿ ಕನಿಷ್ಠ ಉಷ್ಣಾಂಶವು $22^0$ ಸೆ. ಗಿಂತ ಕಡಿಮೆಯಾದಲ್ಲಿ ರೂಮ್ ಹೀಟರ್‌ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುವ್ಯದು ಅವಶ್ಯಕ.<br>5. ಹಾಸಿಗೆಯನ್ನು ತೆಳುವಾಗಿಟ್ಟು ಹಳೆ ಹಾಸಿಗೆ ಒಣಗುವಂತೆ ಸುಣ್ಣವನ್ನು ಹಂತಕ್ಕೆ ತಕ್ಕಂತೆ ಸರಿ ಪ್ರಮಾಣದಲ್ಲಿ ಧೂಳೀಕರಿಸಿ ನೋಡಿಕೊಳ್ಳಬೇಕು.<br>6. ಬಲೆಯನ್ನು ಬಳಸಿ ಹಾಸಿಗೆಯನ್ನು ಸ್ವಚ್ಚಗೊಳಿಸಬೇಕು ಮತ್ತು ರೋಗಗ್ರಸ್ಥ ಹುಳುಗಳನ್ನು ಆಯ್ದು ಮಣ್ಣಿನಲ್ಲಿ ಹೂತು ಹಾಕಿ ನಾಶಪಡಿಸಬೇಕು. ಸಾಕಾಣಿಕೆ ಮನೆ ಮತ್ತು ಅದರ ಸುತ್ತಲೂ ಶೇ.5ರ ಬ್ಲೀಚಿಂಗ್ ಪುಡಿ ಮತ್ತು ಸುಣ್ಣದ ಮಿಶ್ರಣವನ್ನು (1:19) ಧೂಳೀಕರಿಸಬೇಕು ಹಾಗೂ ವೈಯಕ್ತಿಕ ಶುಭ್ರತೆಯನ್ನು ಕಾಪಾಡಬೇಕು.<br>7. ಕಾಲಕಾಲಕ್ಕೆ ಹಾಸಿಗೆ ಸೋಂಕು ನಿವಾರಕಗಳಾದ ಸುರಕ್ಷ, ವಿಜೇತ, ಅಂಕುಶ್, ಸಂರಕ್ಷಕ ಮುಂತಾದ ಔಷಧಿಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಧೂಳೀಕರಿಸುತ್ತಿರಬೇಕು ಮತ್ತು ರೋಗ ಕಾಣಿಸಿಕೊಂಡಾಗ ಹತೋಟಿ ಬರುವವರೆಗೂ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಸೋಂಕು ನಿವಾರಕಗಳನ್ನು ಬಳಸಬೇಕು. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಫ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.